ಪಿರಿಯಾಪಟ್ಟಣ ತಾಲ್ಲೂಕಿಗೆ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1076(152)

ಸದಸ್ಯರ ಹೆಸರು: ಶ್ರೀ ಬಸವರಾಜು.ಹೆಚ್.ಸಿ(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ(ಉನ್ನತ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಪಿರಿಯಾಪಟ್ಟಣ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜಿಗೆ ಯಾವಾಗ ಮಂಜೂರಾತಿ ನೀಡಲಾಯಿತು?

ಆ) ಈವರೆವಿಗೆ ಎಷ್ಟು ಕೊಠಡಿಗಳನ್ನು ನಿರ್ಮಿಸಲಾಗಿದೆ?

ಇ) ಕಾಲೇಜು ಪ್ರಾರಂಭವಾದಗಿನಿಂದ ಇಲ್ಲಿಯವರೆವಿಗೂ ಕಾಲೇಜು ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಕೊಠಡಿಯಲ್ಲಿ ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಅಗತ್ಯವಿರುವ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು; ಹಾಗೂ ನಿಗದಿಪಡಿಸಿರುವ ಅನುದಾನ ಎಷ್ಟು?

ಉ) ಎಷ್ಟು ಅವಧಿಯಲ್ಲಿ ಕೊಠಡಿಗಳ ನಿರ್ಮಾಣ ಪೂರ್ಣಗೊಳಿಸಲಾಗುವುದು?

ಉತ್ತರ

ಅ) 1991-92ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಯಿತು.

ಆ) ಈಗ 05 ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ.

ಇ) ಹೌದು.

ಈ) ಸರ್ಕಾರವು ಹುಡ್ಕೋ ನೆರವಿನ ಯೋಜನೆ ರೂಪಿಸಿದ್ದು ಹುಡ್ಕೋ ಯೋಜನೆಯಡಿ ಸದರಿ ಕಾಲೇಜಿನ ಕಾಮಗಾರಿಯನ್ನು ಪೂರ್ಣಗೊಳಿಸಲು ಹುಡ್ಕೋ ನೆರವಿನ ಆದ್ಯತೆಯ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಉ) ಹುಡ್ಕೋದಿಂದ ಹಣ ಬಿಡುಗಡೆಯಾದ ಕೂಡಲೇ ಕಟ್ಟಡ ಕಾಮಗಾರಿಯನ್ನು ಕೈಗೆತ್ತಿಕೊಂಡು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.